

## ಆ್ಯಪ್‌ಬಗ್ಸ್ ಸೆಕ್ಯುರಿಟಿ ಸ್ಕ್ಯಾನ್




ಆ್ಯಂಡ್ರಾಯ್ಡ್‌ನ ಈ ಆ್ಯಪ್ ಅಪಾಯಕಾರಿ ಸಾಫ್ಟ್‌ವೇರ್ ಬಗ್‌ಗಳಿಂದ ಫೋನಿಗೆ ರಕ್ಷಣೆ ನೀಡುತ್ತದೆ. ಆಕಸ್ಮಿಕವಾಗಿ ನಿಮ್ಮ ಫೋನ್‌ಗಳ ಸಾಫ್ಟ್‌ವೇರ್ ಪ್ರವೇಶಿಸುವ ಅಥವಾ ಸಾಫ್ಟ್‌ವೇರ್ ಅಭಿವೃದ್ಧಿಪಡಿಸುವಾಗಲೇ ಅಡಗಿಕೊಂಡಿರುವ ಈ ಬಗ್ ಅಂಕಿ–ಅಂಶಗಳನ್ನು ನಾಶ ಮಾಡಬಹುದು. ಹೀಗಾಗಿ ಈ ಆ್ಯಪ್ ಅಳವಡಿಸಿಕೊಂಡರೆ ಫೋನ್‌ನಲ್ಲಿ ಸಮಸ್ಯೆ ಉದ್ಭವಿಸಿದಾಗ ನಿಮ್ಮನ್ನು ಎಚ್ಚರಿಸುತ್ತದೆ. ಜೊತೆಗೆ ಅಂಕಿ– ಅಂಶವನ್ನು ಕಾಪಿಡುತ್ತದೆ. ಗೂಗ್ಲ್ ಪ್ಲೇ ಸ್ಟೋರ್‌ನಿಂದ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

## ಡ್ಯೂಯೆಟ್ ಡಿಸ್‌ಪ್ಲೇ

ಐಪ್ಯಾಡ್‌ನ ಈ ಆ್ಯಪ್ ನಿಮ್ಮ ಲ್ಯಾಪ್‌ಟಾಪ್‌ಗೆ ಎರಡನೇ ಸ್ಕ್ರೀನ್ ಒದಗಿಸುತ್ತದೆ. ಐಟ್ಯೂನ್ಸ್ ಸ್ಟೋರ್‌ನಿಂದ ಇದನ್ನು ಡೌನ್‌ಲೋಡ್ ಮಾಡಬಹುದು. ಆದರೆ ಐಒಎಸ್ 7 ಮತ್ತು ಅದರ ನಂತರದ ಆವೃತ್ತಿಯ ಡಿವೈಸ್‌ಗಳಲ್ಲಿ ಕೆಲಸ ಮಾಡುತ್ತದೆ. ಮೂಲ ಆ್ಯಪಲ್ ಐಪ್ಯಾಡ್‌ಗೆ ಸರಿ ಹೋಗುವುದಿಲ್ಲ. ನಿಮ್ಮ ಮ್ಯಾಕ್ ಅಥವಾ ವಿಂಡೋಸ್ ಲ್ಯಾಪ್‌ಟಾಪ್‌ಗೆ ಡೌನ್‌ಲೋಡ್ ಮಾಡಿದ ನಂತರ ಅದಕ್ಕೆ ಯುಎಸ್‌ಬಿ ಕೇಬಲ್ ಮೂಲಕ ಐಪ್ಯಾಡ್ ಸಂಪರ್ಕ ಕಲ್ಪಿಸಿ. ಆ್ಯಪ್ ತೆರೆದ ನಂತರ ಲ್ಯಾಪ್‌ಟಾಪ್ ಸ್ಕ್ರೀನ್‌ನಂತೆ ಐಪ್ಯಾಡ್ ಸ್ಕ್ರೀನ್ ಕೂಡಾ ಕೆಲಸ ಮಾಡುತ್ತದೆ.



## ಇನ್‌ಸ್ಟಾಗ್ರಾಂ 6

ಐಫೋನ್‌ನ ಈ ಉಚಿತ ಆ್ಯಪ್ ಕೊನೆಗೂ ಫೋಟೊ ಕರೆಕ್ಷನ್ ಮೂಲಭೂತ ಟೂಲ್‌ಗಳಾದ ಬ್ರೈಟ್‌ನೆಸ್, ಕಲರ್ ಸ್ಯಾಚುರೇಶನ್ ಜೊತೆಗೆ ಶಾಡೋ, ಶಾರ್ಪ್‌ನೆಸ್ ಮೊದಲಾದ ಸೌಲಭ್ಯ ನೀಡಿದೆ. ಬಳಸಲು ಸುಲಭ ಕೂಡಾ. ಈ ಮೊದಲು ಫೋಟೊ ಎಡಿಟಿಂಗ್ ತಮಾಷೆಗಷ್ಟೇ ಮಾಡಬಹುದಿತ್ತು. ಆದರೆ ಈ ಆವೃತ್ತಿಯಿಂದ ವೃತ್ತಿಪರರಂತೆ ಎಡಿಟ್ ಮಾಡಬಹುದು. ಫೋಟೊ ತೆಗೆಯುವಾಗ ಕೂಡಾ ಆಟೋಮ್ಯಾಟಿಕ್ ಹೊಂದಾಣಿಕೆ ಸವಲತ್ತು ಒದಗಿಸಿದೆ. ಈ ಮೊದಲು ಫೋಟೋದಲ್ಲಿ ಬೆಳಕು ಹೆಚ್ಚು ಇಲ್ಲದಿದ್ದರೆ ಬ್ರೈಟ್‌ನೆಸ್ ನೀಡಲು ಸಾಧ್ಯವಿರಲಿಲ್ಲ. ಆದರೆ ಈಗ ಈ ಸಮಸ್ಯೆಯನ್ನು ಪರಿಹರಿಸಲಾಗಿದೆ. ಫಿಲ್ಟರ್‌ಗಳನ್ನು ಹೊಂದಿಸಿಕೊಳ್ಳಬಹುದು.



## ಪೀಯರ್ ಟ್ರೇನಿಂಗ್– ಇಂಟೆಲಿಜೆನ್ಸ್




ಇದು ನಡೆಯುವಾಗ, ಓಡುವಾಗ, ಸೈಕಲ್ ಹೊಡೆಯುವಾಗ ನಿಮಗೆ ಕೋಚ್ ಮಾಡುತ್ತದೆ. ಜೊತೆಗೆ ರೇಸ್‌ಗೂ ತರಬೇತಿ ನೀಡುತ್ತದೆ. ಹೃದಯದ ಬಡಿತವನ್ನು ಅಳೆಯುವ ಇದು ಐಫೋನ್ ಆ್ಯಪ್. ರೆಕಾರ್ಡ್ ಮಾಡಲಾದ ದನಿ ನಿಮಗೆ ಸಲಹೆ ನೀಡುತ್ತ ಹೋಗುತ್ತದೆ. ನಿಮ್ಮ ಹೃದಯದ ಬಡಿತದ ಆಧಾರದ ಮೇಲೆ ನೀವು ಎಷ್ಟು ವೇಗವಾಗಿ ನಡೆಯಬಹುದು ಅಥವಾ ಓಡಬಹುದು ಎಂಬುದರ ಬಗ್ಗೆ ನಿಮಗೆ ಕೋಚ್ ಮಾಡುತ್ತದೆ. ಇತರ ಫಿಟ್‌ನೆಸ್ ಆ್ಯಪ್‌ಗಳಂತೆ ಇದಕ್ಕೂ ನಿಮ್ಮ ವಯಸ್ಸು, ಎತ್ತರ, ತೂಕ ಮೊದಲಾದ ಅಂಕಿ– ಅಂಶಗಳನ್ನು ಸೇರಿಸಬೇಕು.

■ ಎಸ್. ತುಂಬೆ